**ಸಿ.ಸಿಃ 3328/2021**
**ಪಿ.ಡಬ್ಲ್ಯೂಃ 01**
**ವಿಶ್ವನಾಥ**

**<u>ದಿನಾಂಕಃ15-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು</u>**

**<u>ಪಾಟೀಸವಾಲು ಃ ಆರೋಪಿ ಪರ ಶ್ರೀ ಎಸ್ ಜಿ ಡಿ ವಕೀಲರಿಂದ</u>**

1. ಆರೋಪಿ ಮತ್ತು ನಾನು ಜೋಯಿಡಾದಲ್ಲಿ ಕೆಲಸ ಮಾಡುತ್ತಿದ್ದರಿಂದ ಪರಿಚಿತರು. ಆರೋಪಿ ಜೋಯಿಡಾದ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ಆದರೆ ಅವರ ಹುದ್ದೆ ಬಗ್ಗೆ ನನಗೆ ಗೊತ್ತಿಲ್ಲಾ. ನಾನು ಸನ್ 2011 ರಿಂದ ಉಪನ್ಯಾಸಕನಾಗಿ ಜೋಯಿಡಾದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕೆಲಸ ಮಾಡುತ್ತೇನೆ. 2023 ರಲ್ಲಿ ನನಗೆ ಮಂಗಳೂರಿಗೆ ವರ್ಗಾವಣೆ ಆಗಿದೆ. ನಿಪಿ-4 ರಲ್ಲಿರುವ ಸಹಿ ಯಾರದ್ದೆಂದು ನನಗೆ ಗೊತ್ತಿಲ್ಲ. ಅದೇರೀತಿ ನಿಪಿ-1 ರಲ್ಲಿರುವ ಸಹಿ ಯಾರದ್ದೆಂದು ನನಗೆ ಗೊತ್ತಿಲ್ಲ. ನಾನು ಜೋಡಿಯಿಡಾದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೆ. ಅದೇರೀತಿ ಆರೋಪಿ ಸಹಿ ಬಾಡಿಗೆ ಮನೆಯಲ್ಲಿಯೇ ವಾಸಿಸುತ್ತಿದ್ದ.

2. ನಾನು ಮತ್ತು ಆರೋಪಿ ಜೋಯಿಡಾದಲ್ಲಿರುವಾಗ ಒಬ್ಬರ ಮನೆಗೆ ಇನ್ನೊಬ್ಬರು ಬಂದು ಹೋಗುತ್ತಿದ್ದೆವು. ನನ್ನ ತಂದೆಯ ಹೆಸರು ಅಣ್ಣಪ್ಪ ಮಾನೆ. ನಾನು ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ನಗದು ರೂಪದಲ್ಲಿ 3 ಲಕ್ಷ ಹಣ ನೀಡಬಾರದು ಎಂಬ ಕಾನೂನು ನನಗೆ ಗೊತ್ತು. ನಾನು ಆರೋಪಿಗೆ ನೀಡಿದ ಸಾಲದ ವಿಚಾರವನ್ನು ನನ್ನ ಆದಾಯ ತೆರಿಗೆಯಲ್ಲಿ ನಮೂದಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರ. ಪ್ರಸ್ತುತ ಪ್ರಕರಣದ ಹಣಕಾಸಿನ ವ್ಯವಹಾರ ಬಿಟ್ಟು ನಾನು ಬೇರೆ ಯಾವುದೇ ಹಣಕಾಸಿನ ವ್ಯವಹಾರವನ್ನು ಆರೋಪಿ ಜೊತೆ ಮಾಡಿಲ್ಲಾ.

3. ಆರೋಪಿ ನಾನು ಸೇಂಟ್ ಮಿಲಾಗ್ರಿಸ್ ಸೊಸೈಟಿಯಲ್ಲಿ ಹೊಂದಿದ ಖಾತೆಗೆ ದಿಃ 13-03-2021 ರಂದು ರೂ.189100-00 ಹಣವನ್ನು ವರ್ಗಾವಣೆ ಮಾಡಿದ್ದಾರೆಂದರೆ ಸರಿ. ಅದೇರೀತಿ ಅದೇದಿನ ರೂ. 2000 ಮತ್ತು ರೂ. 25000 ಗಳನ್ನು ವರ್ಗಾವಣೆ ಮಾಡಿದ್ದಾರೆಂದರೆ ಸರಿಯಲ್ಲ.

**ಸಿ.ಸಿಃ 3328/2021**
**ಪಿ.ಡಬ್ಲ್ಯೂಃ 01**
**ವಿಶ್ವನಾಥ**

ಮುಂದುವರೆದ ಪಾಟೀಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

**Sd/-**

(ತೇಜಸ್ವಿನಿ ಸೊಗಲದ)

ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ

ದಂಡಾಧಿಕಾರಿಗಳು, ದಾಂಡೇಲಿ.